# ಡಾ.ಸಲೀಂ ಅಲೀ ಝೂವಾಲಜಿ ಸ್ಟಡಿ ಸರ್ಕಲ್ ನ ಉದ್ಘಾಟನೆ ಹಾಗೂ ವಿಶೇಷ ಉಪನ್ಯಾಸ






ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಧಾರವಾಡ, ಪ್ರಾಣಿಶಾಸ್ತ್ರ ವಿಭಾಗದಲ್ಲಿ ಡಾ.ಸಲೀಂ ಅಲೀ ಝೂವಾಲಜಿ ಸ್ಟಡಿ ಸರ್ಕಲ್ ನ ಉದ್ಘಾಟನೆ ಹಾಗೂ ವಿಶೇಷ ಉಪನ್ಯಾಸವನ್ನು ದಿನಾಂಕ:-04/07/2023 ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ.ಮಂಜುನಾಥ.ಪಾಟೀಲ (ಮ್ಯಾನೇಜರ್ ಲ್ಯಾಬ್ ಕಾರ್ಪ, ಡ್ರಗ್ ಡೆವಲಪಮೆಂಟ್ ಇಂಡಿಯಾ.ಪ್ರೈ.ಲಿ ಬೆಂಗಳೂರು) ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಪ್ರೋ.ಜೆ.ಎಲ್.ಕಲ್ಯಾಣ ವಹಿಸಿದ್ದರು ಹಾಗೂ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಸೈನ್ಸ್ ಅಸೋಸಿಷಿಯನ್ ಮುಖ್ಯಸ್ಥರಾದ ಪ್ರೊ.ಬ್ಲೆಸ್.ಲೋಬೊ ಸರ್ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದ ಸ್ವಾಗತ ಭಾಷಣವನ್ನು ವಿಭಾಗದ ಮುಖ್ಯಸ್ಥರಾದ ಡಾ.ಆರ್.ಡಿ.ಸಣಕಲ್ ಹಾಗೂ ಅತಿಥಿಗಳ ಪರಿಚಯವನ್ನು ಡಾ.ಹೆಚ್.ಡಿ.ನೀಲಗುಂದ ರವರು ನೆರವೇರಿಸಿ ಕೊಟ್ಟರು. ನಂತರ ದೀಪ ಬೆಳಗಿಸುವುದರ ಮೂಲಕ ಡಾ.ಸಲೀಂ ಅಲೀ ಝೂವಾಲಜಿ ಸ್ಟಡಿ ಸರ್ಕಲ್ ನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಅತಿಥಿಗಳಾಗಿ ಆಗಮಿಸಿದ ಶ್ರೀ.ಮಂಜುನಾಥ.ಪಾಟೀಲ **"Drug Discovery to Market and career opportunities in Clinical Research"** ಈ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಅವರ ಉಪನ್ಯಾಸದಲ್ಲಿ ವಿದ್ಯಾರ್ಥಿಗಳ ಜೀವನದ ಬಗ್ಗೆ ವೃತ್ತಿ ಸಮಾಲೋಚನೆ, ಮಾರುಕಟ್ಟೆ ಪ್ರವೃತ್ತಿಗಳು,ಕ್ಲಿನಿಕಲ್ ಸಂಶೋಧನೆಯ ಹಂತಗಳು,ಸಾಂಪ್ರದಾಯಿಕ ಮತ್ತು ಮುಂದುವರೆದ ಲಸಿಕೆ ಅಭಿವೃದ್ಧಿ, ಜೀವವಿಜ್ಞಾನ ಉದ್ಯೋಗಗಳ ಬೇಡಿಕೆಗಳು,ಕ್ಲಿನಿಕಲ್ ಸಂಶೋಧನಾ ವೃತ್ತಿ ಮಾರ್ಗಗಳು,ಪದವಿಧರರಿಗೆ ಮಹಾವಿದ್ಯಾಲಯದಲ್ಲಿ ನೀಡುವ ಕೌಶಲ್ಯಗಳು, ಪ್ರಾಣಿಗಳ ಮೇಲಿನ ವೈದ್ಯಕೀಯ ಪ್ರಯೋಗಗಳ ಬಗ್ಗೆ ಮಾಹಿತಿ ನೀಡಿದರು. ಈ ವಿಶೇಷ ಉಪನ್ಯಾಸದಿಂದ ಜೀವವಿಜ್ಞಾನ ವಿದ್ಯಾರ್ಥಿಗಳ ಪ್ರಯೋಜನ ಪಡೆದರು.

ಪ್ರಾಚಾರ್ಯರಾದ ಪ್ರೋ.ಜೆ.ಎಲ್.ಕಲ್ಯಾಣ, ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಸಂಶೋಧನಾ ಆಧಾರಿತ ಅಧ್ಯಯನವನ್ನು ಮಾಡಬೇಕು ಹಾಗೂ ನಾಯಕತ್ವದ ಗುಣಗಳನ್ನು ಬೇಳೆಸಿಕೊಂಡು ಉತ್ತಮ ಕೇಳುಗರಾಗಿ ಹೊರಹೊಮ್ಮಲು ಸಲಹೆ ನೀಡಿದರು.ಕೊನೆಯದಾಗಿ ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ.ಅಂಬರೀಶ.ಸಿಂದಗಿಯವರು ನೆರವೇರಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಡಾ.ಎಸ್.ಎಸ್.ಮಂಗಳವೇಡೆ, ಪ್ರೊ.ಕೆ.ಕೊಟ್ರೇಶ, ಪ್ರೊ.ಕೆ.ಪಿ.ಕೊಲಕರ. ಪ್ರೊ.ಡೊರಿಸ್ ಸಿಂಗ್, ಪ್ರೊ.ಎಸ್.ಡಿ.ದುಮ್ಮವಾಡ ಹಾಗೂ ವಿವಿಧ ವಿಭಾಗಗಳ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

Shot on moto g62 5G